ಆ) ನಲ್ಲರಾಳ್ಳಹಳ್ಳಿ ಗ್ರಾಮದಲ್ಲಿ ಗುರುತಿಸಿರುವ ೨೦ಜನ ನಿವೇಶನರಹಿತರಿಗೆ ನಿವೇಶನಗಳನ್ನು ಹಂಚಲು ಗ್ರಾಮಠಾಣದಲ್ಲಿ ಜಮೀನು ಲಭ್ಯವಿರುವುದನ್ನು ಈಚೆಗೆ ಗುರುತಿಸಿದ್ದು ನಿವೇಶನ ಹಂಚಲು ಸಮಸ್ಯೆ ಇರುವುದಿಲ್ಲ.

ಇ) ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿ ರಚಿಸಲಾಗಿದೆ. ಈ ಸಮಿತಿ ಮುಂದಿನ ಕ್ರಮ ಜರುಗಿಸುವುದು.

ರಾಜ್ಯದ ಬೃಹತ್ ನೀರಾವರಿ ಯೋಜನೆಗಾಗಿ ವಿಶ್ವಬ್ಯಾಂಕ್ ನೆರವು.

3108-ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಬೃಹತ್ ನೀರಾವರಿ ಯೋಜನೆಗಳಿಗಾಗಿ ವಿಶ್ವಬ್ಯಾಂಕಿನಿಂದ ಈವರೆಗೆ ಪಡೆದಿರುವ ಆರ್ಥಿಕ ಸಹಾಯದ ಮೊತ್ತವೆಷ್ಟು?*

ಆ) *ಈ ಯೋಜನೆಯನ್ನು ಕ್ಲುಪ್ತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ವಿಶ್ವಬ್ಯಾಂಕ್ ತನ್ನ ನೆರವನ್ನು ನಿಲ್ಲಿಸುವ ವಿಚಾರದ ವರದಿಗಳು ನಿಜವೇ?*

ಇ) *ಕೃಷ್ಣಾ ಮೇಲ್ದಂಡೆ ಹಾಗೂ ಹೇಮಾವತಿ ಯೋಜನೆಗಳ ಪ್ರತಿ ಶತ ೧೦೦ ರಷ್ಟು ಕಾರ್ಯವನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಅವಧಿಬೇಕಾಗಬಹುದು?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

1978ರಿಂದ 1986ರ ವರೆಗೆ ಕಾರ್ಯಗತವಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೊದಲ ಹಂತಕ್ಕೆ ವಿಶ್ವಬ್ಯಾಂಕಿನಿಂದ 117.64 ಮಿಲಿಯನ್ ಡಾಲರ್‌ಗಳ ನೆರವು ಸ್ವೀಕರಿಸಲಾಗಿದೆ. 1989ರಿಂದ ಕಾರ್ಯಗತಗೊಳ್ಳುತ್ತಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ೨ನೇ ಹಂತಕ್ಕೆ 325 ಮಿಲಿಯನ್ ಡಾಲರ್‌ಗಳ ನೆರವು ನೀಡಲು ವಿಶ್ವಬ್ಯಾಂಕ್ ಒಪ್ಪಿಕೊಂಡಿದ್ದು ಅದರಲ್ಲಿ ಇದುವರೆಗೂ 15.07 ಮಿಲಿಯನ್ ಡಾಲರ್‌ಗಳನ್ನು ಬ್ಯಾಂಕ್‌ನಿಂದ ಮರುಪಾವತಿ ಪಡೆಯಲಾಗಿದೆ.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ೨ನೇ ಹಂತವನ್ನು ಪೂರ್ಣಗೊಳಿಸದಿದ್ದಕ್ಕಾಗಿ ವಿಶ್ವಬ್ಯಾಂಕ್ ನೆರವು ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ, ಏಕೆಂದರೆ ಈ ಯೋಜನೆಯನ್ನು 1996ರ ವೇಳೆಗೆ ಪೂರ್ಣಗೊಳಿಸಲು ಗುರಿ ಇಟ್ಟುಕೊಳ್ಳಲಾಗಿದೆ.

ಇ) ಕೃಷ್ಣಾಮೇಲ್ದಂಡೆ ಯೋಜನೆಯ ಮೊದಲ ಘಟ್ಟ ಮತ್ತು ಎರಡನೇ ಘಟ್ಟದ ಯೋಜನೆಗಳನ್ನು ಕ್ರಮವಾಗಿ 1996 ಮತ್ತು 2000 ಇಸವಿ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಹೇಮಾವತಿ ಯೋಜನೆಯನ್ನು 1995ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ನೀರಾವರಿ ಯೋಜನೆಗಳು

3004-ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನೀರಾವರಿ ಯೋಜನೆಗಾಗಿ ೧೫-೮-೯೧ನೇ ದಿನಾಂಕದಲ್ಲಿದ್ದಂತೆ ಖರ್ಚು ಮಾಡಲಾದ ಹಣವೆಷ್ಟು?

ಆ) ಈ ಯೋಜನೆ ಸಂಪೂರ್ಣ ಕಾರ್ಯಾರಂಭಗೊಳ್ಳುವವರೆಗೆ ಬೇಕಾಗಿರುವ ಹಣದ ಮೊತ್ತವೆಷ್ಟು.

ಇ) ಈ ಯೋಜನೆ ಪ್ರಾರಂಭವಾದ ನಂತರ ಇಲ್ಲಿಯವರೆಗೆ ವೆಚ್ಚವಾದ ಹಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಹೇಮಾವತಿ ನೀರಾವರಿ ಯೋಜನೆಗೆ ಇದುವರೆವಿಗೆ ರೂ. ೪೨೦ ಕೋಟಿ ರೂ.ಗಳು ಖರ್ಚಾಗಿದೆ.

ಆ)ಈ ಯೋಜನೆ ಸಂಪೂರ್ಣ ಕಾರ್ಯಾರಂಭಗೊಳ್ಳುವವರೆಗೆ ಇನ್ನೂ ರೂ.೬೫೦ ಕೋಟಿ ಬೇಕಾಗುತ್ತದೆ.

ಇ) ಈ ಯೋಜನೆ ಪ್ರಾರಂಭವಾದ ನಂತರ ಇಲ್ಲಿಯವರೆಗೆ ರೂ.೪೨೦ ಕೋಟಿ ಖರ್ಚಾಗಿದೆ.

ಬೆಂಗಳೂರು ದೂರದರ್ಶನದ ಎರಡನೇ ಚಾನಲ್

3081-ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಎರಡನೇ ಚಾನಲ್ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆಯೇ

ಆ) ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಕನ್ನಡ ಕಾರ್ಯಕ್ರಮಕ್ಕೆ ಪ್ರಥಮಾದ್ಯತೆ ದೊರಕಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಹೌದು.

ಆ)

1) ಬೆಂಗಳೂರು ದೂರದರ್ಶನ ಕೇಂದ್ರದಿಂದ ಶನಿವಾರ ಹೊರತುಪಡಿಸಿ ಪ್ರತಿದಿನ ಸಂಜೆ ೫.೩೦ರಿಂದ ರಾತ್ರಿ ೮.೪೦ ಗಂಟೆಯವರೆಗೆ ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತಿದೆ.

2) ಶನಿವಾರ ಹಿಂದಿ ಚಲನಚಿತ್ರದ ನಂತರ ಕನ್ನಡದಲ್ಲಿ ವಾರ್ತೆ ಹಾಗೂ ಇತರೆ ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತಿದೆ.

3) ಭಾನುವಾರದಂದು ಬೆಳಿಗ್ಗೆ ೮.೦೦ರಿಂದ ೯.೦೦ ಗಂಟೆಯವರೆಗೆ ಕನ್ನಡ ಕಾರ್ಯಕ್ರಮಗಳನ್ನು ಹಾಗೂ ಸಂಜೆ ಕನ್ನಡ ಚಿತ್ರವನ್ನು ಪ್ರಸಾರ ಮಾಡಲಾಗುತ್ತಿದೆ.

4) ಹೆಚ್ಚು ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಲು ಒತ್ತಾಯಿಸಲಾಗಿದೆ.

5) ಕನ್ನಡ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ವೀಕ್ಷಿಸುವಂತಾಗಲು ಎಲ್ಲ ಮರುಪ್ರಸಾರ ಕೇಂದ್ರಗಳನ್ನು ಬೆಂಗಳೂರು ಕೇಂದ್ರದೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ.